ಮುಂದಿನ ಅಂಗಳದಲ್ಲಿ ಸಂಜೆ ನಡೆಯುತ್ತಿದ್ದ ಕಾವ್ಯ ಪಟ್ಟಾಂಗಗಳಿಗೆ ಹೋಗುವುದು ರೂಢಿಯಾಗಿತ್ತು. ಅಡಿಗರು ಅಲ್ಲಿಗೆ ಬರುತ್ತಾರೆ ಎನ್ನುವುದೂ ಒಂದು ಪ್ರಮುಖ ಆಕರ್ಷಣೆಯಾಗಿತ್ತು. ಹೊಸದಾಗಿ ಬಂದ ಓದಬೇಕಾದ ಕಾವ್ಯ ಸಂಗ್ರಹಗಳಿಂದ ಹಿಡಿದು ರಾಜಕೀಯ, ಸಾಮಾಜಿಕ, ವೈಯಕ್ತಿಕ ಮೊದಲಾದ ಎಲ್ಲ ಸಂಗತಿಗಳೂ ಅಲ್ಲಿ ಹರಟೆಗೆ ವಸ್ತುಗಳಾಗುತ್ತಿದ್ದವು. ಪರಸ್ಪರ ಲೇವಡಿ, ನಗೆಚೇಷ್ಟೆಗಳಿಂದ ವಾತಾವರಣ ಜೀವಂತವಾಗಿರುತ್ತಿತ್ತು. ಆಗತಾನೆ ತಿರುಮಲೇಶರ ಕವನ ಸಂಗ್ರಹ 'ಮುಖಾಮುಖಿ' ಬಂದಿತ್ತು. ನನಗೆ ಅದು ತುಂಬ ಮೆಚ್ಚುಗೆಯಾಗಿತ್ತು. ಅದನ್ನು ಹಿಂದಿನ ಭೆಟ್ಟಿಯಲ್ಲಿ ನಾಡಿಗರಿಗೂ ಹೇಳಿದ್ದೆ. ಮರುಭೆಟ್ಟಿಯ ಸಂದರ್ಭದಲ್ಲಿ ಅಡಿಗರಿಗೆ ಆ ವಿಷಯ ಹೇಳುತ್ತಾ ನಾಡಿಗರು ಚೇಷ್ಟೆ ಮಾಡಿದರು. ಅಡಿಗರು ಅದಕ್ಕೆ ತಮ್ಮದೇ ಧಾಟಿಯಲ್ಲಿ ಹುಬ್ಬು ಎಗರಿಸಿ ಪ್ರತಿಕ್ರಿಯಿಸಿದರು. ಇಂಥ ಪ್ರಸಂಗಗಳು ಅದೆಷ್ಟೋ.

ನಾಡಿಗರಿಗೆ ಯಾವುದಾದರೂ ಕಾವ್ಯಸಂಗ್ರಹ ಪ್ರಿಯವಾಯಿತು ಎಂದರೆ ಅದರ ಬಗ್ಗೆ ಅವರು ಮತ್ತೆ ಮತ್ತೆ ಎಲ್ಲರೊಂದಿಗೂ ಮಾತಾಡುತ್ತಿದ್ದರು. ತೀವ್ರವಾದ ರಾಗದ್ವೇಷಗಳು ಅವರ ಅಭಿಪ್ರಾಯವನ್ನು ರೂಪಿಸುತ್ತಿರುವಂತೆ ನನಗೆ ಅನೇಕ ಬಾರಿ ತೋರುತ್ತಾ ಇತ್ತು. ನನ್ನ ಕವನ ಸಂಗ್ರಹ 'ಸಿಂದಬಾದನ ಆತ್ಮಕಥೆ'ಯನ್ನು ನನಗಿಂತ ಮೊದಲೇ ಮೆಚ್ಚು ಮಾತುಗಳ ಸಮೇತ ಅದನ್ನು ಅನಂತಮೂರ್ತಿಗಳಿಗೆ ತಲಪಿಸಿದ್ದು ನಾಡಿಗರೆ. 'ಸೌಗಂಧಿಕಾ' ಅವರಿಗೆ ಇಷ್ಟವಾಗಿತ್ತು. ಅವರದ್ದೇ ಆದ ಟೀಕೆಗಳ ಸಮೇತ ಆ ಕವಿತೆಯ ಬಗ್ಗೆ ಅವರು ಎಲ್ಲರೊಂದಿಗೂ ಮಾತಾಡುತ್ತಾ ಇದ್ದರು! ಕಾವ್ಯದ ಬಗೆಗಿನ ಅವರ ನಿಲುವು ತುಂಬ ಗಂಭೀರವಾದುದು. ಕವಿತೆಯ ರಚನೆ ನಾಡಿಗರ ಪಾಲಿಗೆ ಒಂದು ಗಹನವಾದ ವ್ರತ. ಅವರು ಒಂದು ಕವಿತೆಯನ್ನು ಅದೆಷ್ಟು ಬಾರಿ ಬರೆಯುತ್ತಿದ್ದರೋ! ತಮಗೆ ತೃಪ್ತಿ ಆಗುವವರೆಗೂ ಆ ತಿದ್ದುಪಡಿಯ ಕೆಲಸ ನಡೆಸಿಯೇ ನಡೆಸುತ್ತಿದ್ದರು.

ಅವರಿಗೆ ತನ್ನ ಪದ್ಯ ಇತರರ ಪದ್ಯ ಎನ್ನುವ ಭೇದಭಾವವೂ ಇರುತ್ತಿರಲಿಲ್ಲ. ಯಾರಾದರೂ ನಾಡಿಗರಿಗೆ ತಮ್ಮ ಹೊಸ ಕವಿತೆ ಓದಲಿಕ್ಕೆ ಕೊಟ್ಟರೆ ಪೆನ್ನು ಹಿಡಿದು ಆ ಕವಿತೆಯ ಓದಿನಲ್ಲಿ ಮುಳುಗಿಹೋಗುತ್ತಿದ್ದರು. ಅದನ್ನು ತಿದ್ದಿ ತೀಡಿ ತಮ್ಮದೇ ಒಂದು ಹೊಸಪದ್ಯವನ್ನು ಬರೆದುಬಿಡುತ್ತಿದ್ದರು. ಕಾವ್ಯದ ಕುರಿತ ಈ ತೀವ್ರ ತನ್ಮಯತೆಯೇ ಅವರನ್ನು ಕಾವ್ಯದ ಅದ್ಭುತ ಕಸಬುಗಾರನನ್ನಾಗಿ ರೂಪಿಸಿದ್ದು. ಅವರು 'ದಾಂಪತ್ಯಗೀತೆ' ಬರೆಯುತ್ತಿದ್ದಾಗ ನಾನು ಅವರ ನಿಕಟ ಸಂಪರ್ಕದಲ್ಲಿ ಇದ್ದೆ. ಟೇಬಲ್ಲಿನ ತುಂಬ ಆ ಪದ್ಯದ ರಚನೆಗೆ ಆಗತ್ಯವಾದ ಬೇರೆ ಬೇರೆ ಪುಸ್ತಕಗಳು. ಇಂಗ್ಲಿಷ್, ಸಂಸ್ಕೃತ ಕೃತಿಗಳು. ಮಧ್ಯೆ ದಾಂಪತ್ಯಗೀತೆ. ತಮ್ಮ ಖಾಸಗಿ ಬದುಕನ್ನು ಅನುಭವಗಳನ್ನು ಮಥಿಸಿ ಮಥಿಸಿ ಲಯಬದ್ಧಗೊಳಿಸುವ ತನ್ಮಯತೆ. ಸಿಗರೇಟು, ಚಾ ಸರಬರಾಯಿ. ಕೋಣೆಯಲ್ಲಿ ಅಸ್ತವ್ಯಸ್ತವಾಗಿ ಹರಡಿಕೊಂಡಿರುತ್ತಿದ್ದ ಸಾವಿರಾರು ಪುಸ್ತಕಗಳು. ಸಾಹಿತ್ಯ ಕೃತಿಗಳ ಜೊತೆಜೊತೆಗೇ ಹೋಮಿಯೋಪತಿ ವೈದ್ಯಕೀಯ ಗ್ರಂಥಗಳು. ಅದೊಂದು ಮಿಸಾಳಭಾಜಿ ಮಿಶ್ರಣ. ಅಲ್ಲಿ ಗೆಳೆಯರಿಗೆ ಸದಾ ಮುಗುಳ್ನಗೆಯ ಸ್ವಾಗತವಿರುತ್ತಿತ್ತು. ಚಾದೊಂದಿಗೆ ಮಾಲತಿ ನಾಡಿಗ ಕೂಡ ನಮ್ಮ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದರು.

ತಮ್ಮ ಬರವಣಿಗೆ ವ್ಯಾಸಂಗ ಇಷ್ಟೇ ನಾಡಿಗರ ಆಸಕ್ತಿಯಲ್ಲ. ಸಹ ಲೇಖಕರೂ ಮಹತ್ವದ ಕೃತಿಗಳನ್ನು ರಚಿಸಬೇಕೆನ್ನುವುದು ಅವರ ತೀವ್ರ ಆಸಕ್ತಿ. ಏನು ಬರೆದಿರಿ, ಏನು ಓದುತ್ತಿರುವಿರಿ, ಈ ಹೊಸಾ ಪುಸ್ತಕ ನೀವು ಓದಿರುವಿರಾ? ತೆಗೆದುಕೊಂಡು ಹೋಗಿ. ಇದನ್ನು ಓದಿ! ಈಗ